ಇರುತ್ತದೆ. ನಿಜವಾಗಿಯೂ ಅಗತ್ಯವಾದ 'ಸಾಮಾಜಿಕ ನ್ಯಾಯ' ಮತ್ತು 'ಪ್ರಾದೇಶಿಕ ನ್ಯಾಯ'ಗಳು, ಸ್ವಾರ್ಥ ಮತ್ತು ಸ್ನೇಹಗಳಿಂದ ಮಲಿನವಾದಾಗ 'ಗುಣ'ಕ್ಕಿಂತ 'ಗುಂಪುಗಾರಿಕೆ' ಮುಖ್ಯವಾಗುತ್ತದೆ. ಅಧಿಕಾರಿಕೇಂದ್ರಗಳ ಸುತ್ತ 'ಲಾಬಿ' ನಡೆಸುವವರು 'ಕಿಂಗ್' ಮತ್ತು 'ಕಿಂಗ್ ಮೇಕರ್' ಎರಡೂ ಆಗುತ್ತಾರೆ. ಯಾವ ರಾಜಕೀಯ ಪಕ್ಷ ಅಧಿಕಾರಕ್ಕೆ ಬಂದರೂ ಈ ಸನ್ನಿವೇಶದಲ್ಲಿ ಬದಲಾವಣೆ ಆಗುವುದಿಲ್ಲ.

ಈ ಅವನತಿಗೆ 'ಸರ್ಕಾರೀ' ಮತ್ತು 'ಖಾಸಗಿ' ಎಂಬ ಎರಡೂ ವಲಯಗಳು ಕಾಣಿಕೆ ಸಲ್ಲಿಸುತ್ತಿವೆ. ರಿಯಲ್ ಎಸ್ಟೇಟ್ ಸಂಸ್ಥೆಗಳಿರಲಿ, ಜಾತಿಉಪಜಾತಿಗಳ ಮಠಗಳಿರಲಿ, ಪಕ್ಷ ರಾಜಕೀಯ ಮತ್ತು ಸಾಮಾಜಿಕ ಹೋರಾಟಗಳ ನಡುವಿನ ಗಡಿಗೆರೆಗಳನ್ನೇ ಅಳಿಸಿಬಿಟ್ಟಿರುವ 'ಕಲಾವಿದ'ರೇ(?) ಇರಲಿ, ಎಲ್ಲರಿಗೂ ವ್ಯಕ್ತಿಪೂಜೆ ಮುಖ್ಯವೇ ವಿನಾ ತಾತ್ವಿಕ ಬದ್ಧತೆ ಅಲ್ಲ. ಇವರು ನಡೆಸುವ ಸಭೆ, ಸಮ್ಮೇಳನಗಳು ಸಮಾನಾಸಕ್ತರ ಸಂಭಾಷಣೆಯಾಗದ ಹಾಗೆ, ಅನ್ಯವನ್ನು ಒಳಗೊಳ್ಳುವ ಬದಲಿಸುವ ಅಪೇಕ್ಷೆಯನ್ನು ತೋರಿಸುವುದಿಲ್ಲ. 'ಬದ್ಧತೆ' ಮತ್ತು 'ಸಂಕೀರ್ಣತೆ'ಗಳ ನಡುವಿನ ಇಕ್ಕಟ್ಟಿನ ಹಾದಿಯ ಬದಲು, ಹೇಳಿದ್ದನ್ನೇ ಹೇಳುವ ಕಿಸುಬಾಯಿದಾಸರ ಪಡೆ ಹುಟ್ಟಿಕೊಳ್ಳುತ್ತದೆ.

ಇಂತಹ ಸಭೆ–ಸಮ್ಮೇಳನಗಳು ಓದುಗರಲ್ಲಿ ಅಭಿರುಚಿಯನ್ನು ಬೆಳೆಸುವ ಸಾಧ್ಯತೆಗಳು ಕಡಿಮೆ. ಅಂಥ ಅಭಿರುಚಿಯು ನಮ್ಮ ಶಾಲೆ ಕಾಲೇಜುಗಳಲ್ಲಿ ನಿರ್ಮಿತವಾಗಬೇಕೇ ಹೊರತು ಮೂರು ದಿನಗಳ ಜಾತ್ರೆಯಲ್ಲಿ ಅಲ್ಲ. ಪ್ರತಿ ವರ್ಷವೂ ಅದೇ ಅದೇ ಮುಖಗಳು ಮಾಡುವ ಅದೇ ಅದೇ ಉಪನ್ಯಾಸಗಳು 'ಹೊಸ' ಸಂವಾದವನ್ನು ಹುಟ್ಟುಹಾಕಲಾರವು. ಏಕೆಂದರೆ ಅವುಗಳಿಗೆ ಯಾವುದೇ ಬಗೆಯ ಸಾತತ್ಯ ಇಲ್ಲ, ಫಾಲೋ ಅಪ್ ಇಲ್ಲ. ಅಲ್ಲಿ ನೀಡುವ ಊಟ ತಿಂಡಿಗಳ ವಿವರಗಳನ್ನು ರಂಜಕವಾಗಿ ಬಿತ್ತರಿಸುವ ಮಾಧ್ಯಮಗಳಿಗೂ ಅಂತಹ ಕಾಳಜಿ ಇಲ್ಲ. ಇದು ಗಂಭೀರ ಚಿಂತನೆಗಿಂತ 'ವಿವಾದ'ಗಳೇ ಮೊದಲ ಮಣೆ ಪಡೆಯುವ ಕಾಲ. ಹೊಸ ಸಂವಾದಗಳನ್ನು ಹುಟ್ಟುಹಾಕಬಲ್ಲ ಸಾಮರ್ಥ್ಯವಿರುವವರು ಈ ಕಡೆ ಸುಳಿಯುವುದೂ ಇಲ್ಲ. ಅವರ ಮಾತುಗಳನ್ನು ಕೇಳಿಸಿಕೊಳ್ಳುವ ವ್ಯವಧಾನ ಯಾರಿಗೂ ಇಲ್ಲ. ನಮ್ಮಲ್ಲಿ 'ವಿಚಾರ ಸಂಕಿರಣ'ಗಳು 'ಸಾರ್ವಜನಿಕ'ವಾಗಬೇಕೆಂಬ ಒತ್ತಾಯವಿದೆಯೇ ವಿನಾ, ಅವು ಪರಿಣತರ ನಡುವೆ ನಡೆಯುವ ಗಂಭೀರ ಚರ್ಚೆಯೆಂಬ ತಿಳಿವಳಿಕೆ ಇನ್ನೂ ಮೂಡಿಲ್ಲ. ಸಾಂಸ್ಕೃತಿಕ ವಿಕೇಂದ್ರೀಕರಣವೆಂದರೆ ರಾಜಧಾನಿಯಿಂದ ಹಳ್ಳಿಯವರೆಗೆ ಮೂಲಮಾದರಿಗಳ ಅನುಕರಣವಲ್ಲ. ಹಲವು ದಶಕಗಳ ಹಿಂದೆ, ಕುವೆಂಪು ಅವರ ನಾಯಕತ್ವದಲ್ಲಿ ಮೈಸೂರು ವಿಶ್ವವಿದ್ಯಾಲಯವು ಮೊದಲು ಮಾಡಿದ ಪ್ರಚಾರೋಪನ್ಯಾಸಗಳ ಮಾದರಿಯು ಇಂದು ಅಳಿಸಿಹೋಗಿದೆ. ಅಲ್ಲಿ ಕನ್ನಡದಲ್ಲಿ ಜ್ಞಾನದ ಸೃಷ್ಟಿ, ಸಂವಹನ ಎರಡೂ ನಡೆಯುತ್ತಿದ್ದವು. ಈಗ ಬಾವುಟ, ಪೇಟ, ಮೆರವಣಿಗೆ, ಭೂರಿಭೋಜನ ಮುಂತಾದ ಐಕಾನುಗಳ ವಿಜೃಂಭಣೆಯಷ್ಟೇ ನಡೆಯುತ್ತಿದೆ. 'ಉತ್ಸವ', 'ಸಂಭ್ರಮ', 'ಹಬ್ಬ' ಮುಂತಾದ ಪದಗಳ ಬಳಕೆಯೇ ಮುಜುಗರ ಹುಟ್ಟಿಸುತ್ತದೆ.

ಇವುಗಳಿಗೆ ಇರುವ ರಾಜಕೀಯ ಮುಖವು ಧ್ರುವೀಕರಣಗೊಂಡಿದೆ. ಎಡ, ಬಲ, ಮಧ್ಯಮಾರ್ಗ, ಅವಕಾಶವಾದ ಮುಂತಾದವು 'ಕೂಡುಕೋಣೆ'ಗಳಾಗಿವೆ. (ಕಂಪಾರ್ಟ್‌ಮೆಂಟ್) ಆರ್ಥಿಕವಾಗಿ ನೋಡಿದಾಗ ಇವು ಚಪ್ಪರ, ಊಟ, ಸಾರಿಗೆ, ಲೈಟಿಂಗು, 'ಸಾಂಸ್ಕೃತಿಕ ಕಾರ್ಯಕ್ರಮ'ಗಳ ಗುತ್ತಿಗೆಹೊತ್ತ 'ಕಲ್ಚರ್ ಕಂಟ್ರಾಕ್ಟರ್'ಗಳಿಗೆ ಚಿನ್ನದ ಮೊಟ್ಟೆ ಇಡುವ ಕೋಳಿಗಳಾಗಿವೆ.

ಈಚಿನ ವರ್ಷಗಳಲ್ಲಿ ಜನರು ಕಥೆ, ಕವಿತೆಗಳಂತಹ ಸೃಜನಶೀಲ ಸಾಹಿತ್ಯಕ್ಕಿಂತ, 'ಮಾಹಿತಿ'/ ವಿಚಾರಗಳನ್ನು ಕೊಡುವ 'ಜ್ಞಾನಸಾಹಿತ್ಯ'ದಲ್ಲಿ ಆಸಕ್ತಿಯನ್ನು ಬೆಳೆಸಿಕೊಳ್ಳುತ್ತಿದ್ದಾರೆ. ಅಥವಾ 'ಮನರಂಜನೆ'ಯೆಂಬ ಹುಸಿಸರಕನ್ನು 'ಸಾಹಿತ್ಯ'ವೆಂದು ಗುಟುಕರಿಸುತ್ತಿದ್ದಾರೆ. 'ಆಶಯ'ಗಳ